**ಶ್ರೀ ಕೋಟ ಶ್ರೀನಿವಾಸ ಪೂಜಾರಿ, ಮಾನ್ಯ ವಿಧಾನ ಪರಿಷತ್ ಸದಸ್ಯರು ಇವರು ನಿಯಮ 72ರಡಿ ನೀಡಿರುವ ಸೂಚನೆ ಸಂಖ್ಯೆ 54ಕ್ಕೆ ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರ ಹೇಳಿಕೆ**

---

## ಸೂಚನೆ:-

**ರಾಜ್ಯದಲ್ಲಿ ಕರಾವಳಿ ಮತ್ತು ಒಳನಾಡು ಮೀನುಗಾರಿಕಾ ಅಭಿವೃದ್ಧಿಯಲ್ಲಿ ಹಲವು ಸಮಸ್ಯೆಗಳು ಎದುರಾಗಿದ್ದು, ಮೀನುಗಾರರ ಸಾಲ ಸೌಲಭ್ಯ, ಸಬ್ಸಿಡಿ, ಮೀನುಗಾರರಿಗೆ ಕಿಸಾನ್ ಕ್ರೆಡಿಟ್ ಕಾರ್ಡ್ ವಿತರಣೆಯೂ ಸೇರಿದಂತೆ ಮೀನುಗಾರರ ಸಮಸ್ಯೆಗಳ ಕುರಿತು.**

## ಹೇಳಿಕೆ:-

**ವಾಣಿಜ್ಯ ಮತ್ತು ಪ್ರಾದೇಶಿಕ ಬ್ಯಾಂಕುಗಳ ಮೂಲಕ ಮೀನುಗಾರಿಕೆ ಚಟುವಟಿಕೆ ಕೈಗೊಳ್ಳಲು ಶೂನ್ಯ ಬಡ್ಡಿದರದಲ್ಲಿ ರೂ.50000/- ದಿಂದ ರೂ.3,00,000-00 ಗಳವರೆಗೆ ಮಹಿಳಾ ಮೀನುಗಾರರಿಗೆ ವಿವಿಧ ಬ್ಯಾಂಕುಗಳಿಂದ ಮಂಜೂರಾದ ಸಾಲದ ಬಡ್ಡಿ ಸಹಾಯಧನ ಯೋಜನೆ.**

ರಾಜ್ಯದಲ್ಲಿ ಮೀನುಗಾರಿಕೆಯು ಅತಿ ಮುಖ್ಯವಾದ ಉದ್ಯಮವಾಗಿದೆ. ರಾಜ್ಯದಲ್ಲಿ ಕರಾವಳಿ ಹಾಗೂ ಒಳನಾಡು ಮೀನುಗಾರಿಕೆಯನ್ನು ಒಳಗೊಂಡಂತೆ ಸುಮಾರು 9.84 ಲಕ್ಷ ಮೀನುಗಾರರಿದ್ದು, ಇವರಲ್ಲಿ ಸುಮಾರು 3.01 ಲಕ್ಷ ಮೀನುಗಾರರು ಸಕ್ರಿಯ ಮೀನುಗಾರಿಕೆಯಲ್ಲಿ ತೊಡಗಿದ್ದು ದಿನನಿತ್ಯದ ಜೀವನಕ್ಕೆ ಮೀನುಗಾರಿಕೆಯನ್ನೇ ಅವಲಂಬಿಸಿದ್ದಾರೆ. ಇವರಿಗೆ ಮೀನುಗಾರಿಕೆ ಚಟುವಟಿಕೆಗಳ ಅಗತ್ಯತೆಗಳನ್ನು ಪೂರೈಸಿಕೊಳ್ಳುವ ಸಲುವಾಗಿ ಬಂಡವಾಳದ ಅವಶ್ಯಕತೆ ಇರುವುದನ್ನು ಮನಗಂಡು ವಾಣಿಜ್ಯ ಮತ್ತು ಪ್ರಾದೇಶಿಕ ಬ್ಯಾಂಕುಗಳ ಮೂಲಕ ಮೀನುಗಾರಿಕೆ ಚಟುವಟಿಕೆ ಕೈಗೊಳ್ಳಲು ಶೂನ್ಯ ಬಡ್ಡಿದರದಲ್ಲಿ ರೂ.50000/- ಗಳವರೆಗೆ ಮಹಿಳಾ ಮೀನುಗಾರರಿಗೆ ವಿವಿಧ ಬ್ಯಾಂಕುಗಳಿಂದ ಮಂಜೂರಾದ ಸಾಲದ ಬಡ್ಡಿ ಸಹಾಯಧನ ಯೋಜನೆ ಯಡಿಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ಪಸಂಮೀ 58 ಮೀಇಯೋ 2018 ದಿನಾಂಕ: 25-08-2018 ರನ್ವಯ ಶೂನ್ಯ ಬಡ್ಡಿದರದಲ್ಲಿ ರೂ.50000/- ಗಳವರೆಗೆ ಸಾಲವನ್ನು ನೀಡಲಾಗುತ್ತಿತ್ತು.

ಯೋಜನೆ ಅನುಷ್ಠಾನ ಪ್ರಾರಂಭವಾದಾಗಿನಿಂದ ಸುಮಾರು 50,000 ಮೀನುಗಾರರು ಈ ಸೌಲಭ್ಯವನ್ನು ಪಡೆದುಕೊಂಡಿರುತ್ತಾರೆ.

2023-24 ಸಾಲಿನ ಜುಲೈ ತಿಂಗಳ ಆಯವ್ಯಯ ಭಾಷಣದ ಕಂಡಿಕೆ-59ರಲ್ಲಿ "ಮೀನುಗಾರ ಮಹಿಳೆಯರ ಆರ್ಥಿಕ ಸ್ವಾವಲಂಬನೆ ಹಾಗೂ ವಹಿವಾಟು ವಿಸ್ತರಣೆಗೆ ನೆರವಾಗಲು ಬ್ಯಾಂಕುಗಳಲ್ಲಿ ಬಡ್ಡಿ ರಹಿತವಾಗಿ ನೀಡುವ ಸಾಲದ ಮಿತಿ ಯನ್ನು ರೂ.50,000/- ಗಳಿಂದ ಮೂರು ಲಕ್ಷ ರೂ.ಗಳಿಗೆ ಹೆಚ್ಚಿಸಲಾಗುವುದು" ಎಂದು

ಘೋಷಿಸಿರುವ ಹಿನ್ನೆಲೆಯಲ್ಲಿ ಮಹಿಳಾ ಮೀನುಗಾರರಿಗೆ ಅನುಕೂಲವಾಗುವಂತೆ ಶೂನ್ಯ ಬಡ್ಡಿ ದರದಲ್ಲಿ ನೀಡುವ ಸಾಲದ ಮಿತಿಯನ್ನು 50,000 ರೂ. ಗಳಿಂದ ಮೂರು ಲಕ್ಷ ರೂ. ಗಳಿಗೆ ಹೆಚ್ಚಿಸಿ ಸಾಲವನ್ನು ವಾಣಿಜ್ಯ ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳಿಂದ ಪಡೆಯಲು ಹಾಗೂ ವ್ಯತ್ಯಾಸದ ಬಡ್ಡಿಯನ್ನು ವಾಣಿಜ್ಯ ಬ್ಯಾಂಕ್‌ಗಳಿಗೆ ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳಿಗೆ ಸರ್ಕಾರದಿಂದ ಮರುಪಾವತಿಸುವುದಕ್ಕೆ ಬಡ್ಡಿ ಸಹಾಯಧನ ಯೋಜನೆಯ ಅನುಷ್ಠಾನಕ್ಕೆ ಸರ್ಕಾರದ ಆದೇಶ ಸಂಖ್ಯೆ:ಪಸಂಮೀ ಇ-121 ಮೀಇಯೋ 2023, ದಿನಾಂಕ: 06-09-2023 ರಲ್ಲಿ ಮಂಜೂರಾತಿ ನೀಡಲಾಗಿರುತ್ತದೆ.

**ಸಾಲ ಮನ್ನಾ ಯೋಜನೆ**

2017-18 ಮತ್ತು 2018-2019ನೇ ಸಾಲುಗಳಲ್ಲಿ ಮೀನುಗಾರರು ಶೇ.2ರ ಬಡ್ಡಿದರದಲ್ಲಿ ವಾಣಿಜ್ಯ ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಿಂದ ಪಡೆದ ರೂ.50,000/-ದವರೆಗಿನ ಸಾಲ ಮರುಪಾವತಿಸಲು ಬಾಕಿ ಇರುವ ಮೊತ್ತ ರೂ.60.584 ಕೋಟಿಗಳನ್ನು ಷರತ್ತಿಗೊಳಪಟ್ಟು ಮನ್ನಾ ಮಾಡಲು ಸರ್ಕಾರವು ಆದೇಶಿಸಿ, ಸದರಿ ಯೋಜನೆಗೆ ರೂ.60.00 ಕೋಟಿಗಳನ್ನು ಬಿಡುಗಡೆಗೊಳಿಸಲಾಗಿದೆ. ಸದರಿ ಅನುದಾನದಲ್ಲಿ ಆಯುಕ್ತರು, ಕಂದಾಯ, ಭೂ ದಾಖಲೆ ಮತ್ತು ಸರ್ವೇಕ್ಷಣಾ ಇಲಾಖೆ, ಬೆಂಗಳೂರು ರವರು ಒಟ್ಟು ರೂ.49.00 ಕೋಟಿ ಮೊತ್ತವನ್ನು ಮೀನುಗಾರರ ಸಾಲ ಮನ್ನಾ ಯೋಜನೆಯ ಅನುಷ್ಠಾನಕ್ಕಾಗಿ ಮೀನುಗಾರಿಕೆ ಇಲಾಖೆಗೆ ಬಿಡುಗಡೆ ಮಾಡಿರುತ್ತಾರೆ. ಈವರೆಗೆ ಒಟ್ಟು 23445 ಅರ್ಜಿದಾರರ ಪೈಕಿ ಅರ್ಹ 20124 ಫಲಾನುಭವಿಗಳಿಗೆ ರೂ.49,83,11,084/- ಗಳನ್ನು ಜಮಾ ಮಾಡಲಾಗಿದೆ.

**ಮೀನುಗಾರಿಕೆ ಚಟುವಟಿಕೆಗಳಿಗೆ ಕಿಸಾನ್ ಕ್ರೆಡಿಟ್ ಕಾರ್ಡ್ ವಿತರಣೆ ಯೋಜನೆ:-**

ಕೇಂದ್ರ ಸರ್ಕಾರ 2018-19ನೇ ಸಾಲಿನ ಆಯವ್ಯಯದಲ್ಲಿ ಮೀನು ಕೃಷಿಕರಿಗೆ ತಮ್ಮ ಮೀನುಗಾರಿಕೆ ಚಟುವಟಿಕೆಗಳನ್ನು ಕೈಗೊಳ್ಳಲು ಬಂಡವಾಳದ ಅಗತ್ಯತೆಗಳನ್ನು ಪೂರೈಸಲು ಕಿಸಾನ್ ಕ್ರೆಡಿಟ್ ಕಾರ್ಡ್ (ಕೆಸಿಸಿ) ಸೌಲಭ್ಯವನ್ನು ವಿಸ್ತರಿಸುವುದಾಗಿ ಘೋಷಿಸಲಾಗಿತ್ತು.

ಭಾರತೀಯ ರಿಸರ್ವ್ ಬ್ಯಾಂಕ್ (ಆರ್ ಬಿಐ) ಸುತ್ತೋಲೆ ಸಂಖ್ಯೆ: ಆರ್ ಬಿಐ/2018-19/112/ಎಫ್.ಐ.ಡಿ.ಸಿಒ.ಎಫ್.ಎಸ್.ಡಿ ದಿನಾಂಕ: 04-02-2020 ರಂದು ಮತ್ತು ಬಿಸಿ12 /05.05.10/2018-19 ಮೀನು ಕೃಷಿಕರಿಗೆ ತಮ್ಮ ಬಂಡವಾಳದ ಅಗತ್ಯವನ್ನು ಪೂರೈಸಲು ಕೆಸಿಸಿ ಸೌಲಭ್ಯವನ್ನು ವಿಸ್ತರಿಸಲು ದಿನಾಂಕ: 04-02-2020 ರಲ್ಲಿ ವಿವರವಾದ ಮಾರ್ಗಸೂಚಿಗಳನ್ನು ಹೊರಡಿಸಿದೆ. ಇದಲ್ಲದೆ, ದಿನಾಂಕ: 17-06-2020 ರಂದು ಮತ್ತು

ಆನಂತರ ನಡೆದ ಸಭೆಗಳಲ್ಲಿ, ಬ್ಯಾಂಕರ್ ಗಳೊಂದಿಗೆ ವಿವರವಾದ ಚರ್ಚೆಗಳನ್ನು ನಡೆಸಿದ ನಂತರ ಹಣಕಾಸು ನೀಡುವ ಪ್ರಮಾಣವನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

**ಮೀನು ಸಾಕಾಣಿಕೆ**:-

ಅ) ಒಳನಾಡು ಮೀನು ಕೃಷಿ - ಪ್ರತಿ ಎಕರೆಗೆ ರೂ. 2,00,000/-

ಆ) ಪಂಜರ ಕೃಷಿ (ಕೇಜ್ ಕಲ್ಚರ್) (6mx4m) - ಒಂದು ಬೆಳೆಗೆ ರೂ. 1,00,000/-

ಇ) ಪಚ್ಚಿಲೆ ಕೃಷಿ (Rack and rope system) -ಪ್ರತಿ ರಾಕ್ ಗೆ ರೂ. 5000/- (ಪ್ರತಿ ಬೆಳೆ ಹಾಗೂ ಪ್ರತಿ ವರ್ಷಕ್ಕೆ)

ಈ) ಹಿನ್ನೀರಿನಲ್ಲಿ ಸಿಗಡಿ ಕೃಷಿ - ಎಕರೆಗೆ ರೂ. 2,80,000/-(ಒಂದು ಬೆಳೆಗೆ 5 ತಿಂಗಳು)

ಉ) RAS ಪದ್ಧತಿಯ ಮೀನು ಸಾಕಣೆ ರೂ.3,00,000/-(100m3 ಸಾಮರ್ಥ್ಯದಲ್ಲಿ ಒಂದು ಬೆಳೆಗೆ 2 ಟನ್ ಮೀನು ಉತ್ಪಾದನೆ ಮಾಡಲು)

ಊ) ಬಯೋ-ಫ್ಲಾಕ್ ಮಾದರಿ ಮೀನು ಉತ್ಪಾದನೆ - ರೂ. 3,00,000/- (100m3 ಸಾಮರ್ಥ್ಯದಲ್ಲಿ ಒಂದು ಬೆಳೆಗೆ 2 ಟನ್ ಮೀನು ಉತ್ಪಾದನೆ ಮಾಡಲು)

ಋ) ಒಳನಾಡು ಕೊಳಗಳಲ್ಲಿ ಮೀನುಗಾರಿಕೆ ಚಟುವಟಿಕೆ - ರೂ.2,000/-

**ಕಡಲ ಮೀನುಗಾರಿಕೆ:--**

ಅ) ಸಮುದ್ರ ಮೀನುಗಾರಿಕೆ (15x20ಮೀ) - 15 ದಿನಗಳ ಒಂದು ಟ್ರಿಪ್ ಗೆ ರೂ.3,30,000/-

ಆ) ಸಮುದ್ರ ಮೀನುಗಾರಿಕೆ (10x15ಮೀ) - 5 ರಿಂದ 6 ದಿನಗಳ ಒಂದು ಟ್ರಿಪ್ ಗೆ ರೂ.1,25,000/-

ಇ) ಮೋಟರೈಸಡ್ ಬೋಟ್ ವೆಚ್ಚ - ದಿನಕ್ಕೆ ರೂ.3,500/-

ಈ) ಸಾಂಪ್ರದಾಯಿಕ ದೋಣಿ ವೆಚ್ಚ - ದಿನಕ್ಕೆ ರೂ.500/-

ಉ) ಕಡಲ ಮೀನುಗಾರಿಕೆ ದೋಣಿ (10 ಮೀಟರ್ ಗಿಂತ ಕಡಿಮೆ ಉದ್ದದ)10 ದಿನದ ಟ್ರಿಪ್ ಗಾಗಿ – ರೂ.2,00,000/-

ಊ) ನದಿ/ಕೆರೆ/ಜಲಾಶಯದ ಮೀನುಗಾರಿಕೆ ಪರವಾನಗಿಯನ್ನು ಹೊಂದಿರುವ ಮೀನುಗಾರರಿಗೆ– ರೂ. 20,000/-ಪ್ರತಿ ಪರವಾನಗಿಗೆ

ಇದಲ್ಲದೆ, ಮೀನುಗಾರಿಕೆಗಾಗಿ ಕೆಸಿಸಿ ಯನ್ನು ವಿತರಿಸುವ ಬಗ್ಗೆ ಆರ್.ಬಿ.ಐ ಮಾರ್ಗದರ್ಶಿ ಸೂತ್ರಗಳು (Circular of RBI No.FIDD.CO.FSD.BC-12/05.05.010/2018-19 Dated: 04-02-2019) ಈ ಕೆಳಗಿನಂತಿವೆ:-

3.1 ಮೀನುಗಾರಿಕೆ

3.1.1 ಒಳನಾಡು ಮೀನುಗಾರಿಕೆ ಮತ್ತು ಜಲಕೃಷಿ.

3.1.1.1 ಮೀನುಗಾರಿಕೆ, ಮೀನು ರೈತರು (ವೈಯಕ್ತಿಕ & ಗುಂಪುಗಳು / ಪಾಲುದಾರರು / ಹಂಚಿಕೆ ಬೆಳೆಗಾರರು / ಗೇಣಿದಾರ ರೈತರು), ಸ್ವಸಹಾಯ ಗುಂಪುಗಳು, ಜಂಟಿ ಹೊಣೆಗಾರಿಕೆ ಗುಂಪುಗಳು ಮತ್ತು ಮಹಿಳೆಯರು.

3.1.1.2 ಫಲಾನುಭವಿಗಳು ಮೀನು ಕೃಷಿಗೆ ಸಂಬಂಧಿಸಿದ ಯಾವುದೇ ಮೀನುಗಾರಿಕೆ ಸಂಬಂಧಿತ ಚಟುವಟಿಕೆಗಳಾದ ಕೊಳ, ಕೆರೆ, ತೆರೆದ ನೀರಿನ ಮೂಲಗಳು, ರೇಸ್ ವೇ, ಹ್ಯಾಚರಿ, ಮೀನು ಸಾಕಣೆ ಘಟಕ, ಮೀನು ಕೃಷಿ ಮತ್ತು ಮೀನುಗಾರಿಕೆಗೆ ಸಂಬಂಧಿಸಿದ ಚಟುವಟಿಕೆಗಳಿಗೆ ಅಗತ್ಯ ಪರವಾನಗಿ ಹೊಂದಿರಬೇಕು ಮತ್ತು ರಾಜ್ಯದ ಯಾವುದೇ ನಿರ್ದಿಷ್ಟ ಮೀನುಗಾರಿಕೆ ಮತ್ತು ಸಂಬಂಧಿತ ಚಟುವಟಿಕೆಗಳನ್ನು ಹೊಂದಿರುವವರು.

3.1.2.1ಸಮುದ್ರ ಮೀನುಗಾರಿಕೆ

2.1.1.1.1ರಲ್ಲಿ ಪಟ್ಟಿ ಮಾಡಲಾದ ಫಲಾನುಭವಿಗಳು ಮೇಲೆ, ನೋಂದಾಯಿತ ಮೀನುಗಾರಿಕಾ ದೋಣಿ /ದೋಣಿಯನ್ನು ಹೊಂದಿರುವ, ಮೀನುಗಾರರು ಮತ್ತು ಸಮುದ್ರದಲ್ಲಿ ಮೀನುಗಾರಿಕೆಗಾಗಿ ಅಗತ್ಯ ಮೀನುಗಾರಿಕೆ ಪರವಾನಗಿ / ಅನುಮತಿ, ಸಮುದ್ರ ಮತ್ತು ತೆರೆದ ಸಮುದ್ರ ಮತ್ತು ಇತರೆ ರಾಜ್ಯದ ಯಾವುದೇ ನಿರ್ದಿಷ್ಟ ಮೀನುಗಾರಿಕೆ ಮತ್ತು ಚಟುವಟಿಕೆಗಳನ್ನು ಹೊಂದಿರುವವರು.

**ಇದುವರೆಗೂ ವಿತರಿಸಲಾದ ಕಿಸಾನ್ ಕ್ರೆಡಿಟ್ ಕಾರ್ಡ್ ಗಳ ವಿವರ ಈ ಕೆಳಕಂಡಂತಿದೆ:-**

| ವರ್ಷ | ವಿತರಣೆಯಾದ ಕಿಸಾನ್ ಕ್ರೆಡಿಟ್ ಕಾರ್ಡ್ ಗಳು (ಸಂಖ್ಯೆ) | ವಿತರಿಸಿದ ಮೊತ್ತ (ರೂ.ಕೋಟಿಗಳಲ್ಲಿ) |
|---|---|---|
| 2021-22 | 3239 | 33.33 |
| 2022-23 | 12729 | 44.10 |
| 2023-24 (ದಿ: 17.11.2023 ರವರೆಗೆ) | 13422 | 65.68 |

**ಮೀನುಗಾರರು ಎದುರುಸುತ್ತಿರುವ ಸಮಸ್ಯೆಗಳ ಕುರಿತು.**

ಮೀನುಗಾರರ ಸಮಸ್ಯೆಗಳ ಬಗ್ಗೆ ಆಗಿಂದಾಗ್ಗೆ ಪಾಲುದಾರರ ಸಭೆಗಳನ್ನು ಜನ ಪ್ರತಿನಿಧಿಗಳು ಹಾಗೂ ಮೀನುಗಾರರ ಮುಖಂಡರುಗಳೊಂದಿಗೆ ಮೀನುಗಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ಆಲಿಸಿ ಅವುಗಳಿಗೆ ಸೂಕ್ತ ಪರಿಹಾರ ನೀಡಲಾಗುತ್ತದೆ.

- ಯಾಂತ್ರಿಕ ದೋಣಿಗಳಿಗೆ ನೀಡುತ್ತಿರುವ ವಾರ್ಷಿಕ ಡೀಸೆಲ್ ಮಿತಿಯನ್ನು 1.50 ಲಕ್ಷ ಕಿಲೋಲೀಟರ್ ದಿಂದ 2.0 ಲಕ್ಷ ಕಿಲೋಲೀಟರ್‌ಗೆ ನೀಡುವ ಯೋಜನೆಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಅದರಂತೆ, ಅನುಷ್ಠಾನಗೊಳಿಸಲಾಗುತ್ತದೆ.
- ಮೀನುಗಾರಿಕೆ ದೋಣಿಗಳಿಗೆ ಸೀಮೆಎಣ್ಣೆ ಇಂಜಿನ್‌ಗಳನ್ನು ಪೆಟ್ರೋಲ್ ಇಂಜಿನ್‌ಗಳಾಗಿ ಬದಲಾಯಿಸಲು ತಲಾ ರೂ.50,000/- ಗಳ ಸಹಾಯಧನ ನೀಡಲು ಆದೇಶಿಸಲಾಗಿದೆ. ಇದಕ್ಕೆ ಪ್ರಸಕ್ತ ಸಾಲಿನಲ್ಲಿ 4000 ಇಂಜಿನ್ ಬದಲಾವಣೆಗೆ ರೂ.20.00 ಕೋಟಿಗಳ ಅನುದಾನವನ್ನು ಒದಗಿಸಲಾಗಿದೆ.

- ನಾಡದೋಣಿಗಳು ಬಳಸುವ ಸೀಮೆಎಣ್ಣೆ ನಿರಂತರವಾಗಿ ದೊರಕಬೇಕು ಎಂಬ ಉದ್ದೇಶದಿಂದ ರಾಜ್ಯದ ಅನುದಾನದಲ್ಲಿ ಕೈಗಾರಿಕೆ ಸೀಮೆಎಣ್ಣೆಯನ್ನು ಪ್ರತಿ ಲೀಟರ್ ಗೆ ರೂ. 35 ರ ರಿಯಾಯಿತಿ ದರದಲ್ಲಿ ಸರಬರಾಜು ಮಾಡಲು ಕ್ರಮವಹಿಸಿ ಈಗಾಗಲೇ ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ ರವರಿಂದ ಕಾರ್ಯಗತಗೊಳಿಸಲಾಗಿದೆ.

- ಮೀನುಗಾರಿಕೆ ಮಾಡುವಾಗ ಸಂಭವಿಸಿದ ಅವಘಡಗಳಲ್ಲಿ ಮೃತರ ವಾರಸುದಾರರಿಗೆ ರೂ.6.00 ಲಕ್ಷ ಪರಿಹಾರ ನೀಡಲಾಗುತ್ತಿದೆ.

- ಮೀನುಗಾರಿಕೆಯಲ್ಲಿ ತೊಡಗಿರುವಾಗ ಅಂಗವಿಕಲತೆ ಅಥವಾ ಮೀನುಗಾರಿಕೆ ಚಟುವಟಿಕೆಯಲ್ಲಿ ತೊಡಗಿರುವಾಗ ಅಪಘಾತ ಸಂಭವಿಸಿ ಮೀನುಗಾರರು ಶಾಶ್ವತ ಅಂಗವಿಕಲರಾದಲ್ಲಿ ರೂ.3.00 ಲಕ್ಷ ಹಾಗೂ ಭಾಗಶ: ಅಂಗವಿಕಲರಾದಲ್ಲಿ ರೂ.1.50 ಲಕ್ಷ ಪರಿಹಾರ ನೀಡಲಾಗುವುದು.

- ಪ್ರಾಕೃತಿಕ ವಿಕೋಪದಿಂದಾದ ನಾಡದೋಣಿ / ಮೋಟರೀಕೃತ ದೋಣಿಗಳ ಹಾನಿಗೆ ಹಾಗೂ ಬಲೆ ಇನ್ನಿತರ ಸ್ವತ್ತು ಹಾನಿಗೆ ಗರಿಷ್ಟ ರೂ.1.00 ಲಕ್ಷ ಪರಿಹಾರ ನೀಡಲಾಗುವುದು.

- ಮೀನುಗಾರಿಕೆ ಚಟುವಟಿಕೆಯಲ್ಲಿ ತೊಡಗಿರುವಾಗ ಅಪಘಾತ ಸಂಭವಿಸಿದಲ್ಲಿ ವೈದ್ಯಕೀಯ ಶುಶ್ರೂಷೆಗಾಗಿ ಮಾಡಿದ ವೆಚ್ಚದ ಶೇ.50 ರಷ್ಟು ಅಥವಾ ಗರಿಷ್ಟ ರೂ. 1.00 ಲಕ್ಷ ಪರಿಹಾರ ನೀಡಲಾಗುವುದು.

- ಮಂಗಳೂರು ಬಂದರಿನ 3ನೇ ಹಂತದ ಕಾಮಗಾರಿಗೆ ಸಂಬಂಧಿಸಿದಂತೆ, ರೂ.49.50 ಕೋಟಿ ಅಂದಾಜು ಪಟ್ಟಿಗೆ ರಾಜ್ಯ ಸರ್ಕಾರದ ಅನುಮೋದನೆ ನೀಡಿ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

---

ಸಂಖ್ಯೆ: ಪಸಂಮೀ ಇ-205 ಮೀಇಯೋ 2023

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು